# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

ನಿಗಮದ ನೋಂದಾಯಿತ ಕಚೇರಿ: ನಂ: 29,
ವಿಜಯನಗರ 2 ನೇ ಹಂತ,
ಕಾವೇರಿ ಗ್ರಾಮಿಣ ಬ್ಯಾಂಕ್ ರಸ್ತೆ, ಹಿನಕಲ್,
ಮೈಸೂರು-570017
ನಿಗಮ ವೆಬ್ ಸೈಟ್:www.cescmysore.org.
ಇಮೇಲ್: gmcescmysore@gmail.com
CIN No.U40109KA2004SGC035177

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ)
ರವರ ಕಚೇರಿ ಚಾವಿಸನಿನಿ, ಕಾ&ಪಾ ಗ್ರಾಮಾಂತರ ಉಪ ವಿಭಾಗ
ಮದ್ದೂರು-571428
ದೂರವಾಣಿ: 08232-236255,
ಮೊಬೈಲ್: 9448994850
ಫ್ಯಾಕ್ಸ್: 08232-233600
ಇ-ಮೇಲ್: aeemdr2@rediffmail.com

ಕ್ರಮಾಂಕ: ಸ.ಕಾ.ನಿ.ಇಂ(ವಿ)/ಸಇಂ(ತಾಂ)/ಗ್ರಾ.ಉ.ವಿ/ಮದ್ದೂರು/2019-20/ ದಿನಾಂಕ:

## ಜನಸಂಪರ್ಕ ಸಭಾ ನಡಾವಳಿ

ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಸೆಸ್ಕ್, ವಿಭಾಗೀಯ ಕಛೇರಿ, ಮದ್ದೂರು ರವರ ಅಧ್ಯಕ್ಷತೆಯಲ್ಲಿ ವಿಭಾಗೀಯ ಕಛೇರಿ ಮದ್ದೂರಿನಲ್ಲಿ ದಿನಾಂಕ: 07.08.2019 ರಂದು ಮಧ್ಯಾಹ್ನ 2.30 ಗಂಟೆಗೆ ಜರುಗಿದ ಗ್ರಾಮಾಂತರ ಉಪವಿಭಾಗದ ಜನ ಸಂಪರ್ಕ ಸಭೆಯ ನಡಾವಳಿ.

ಸಭೆಯಲ್ಲಿ ಹಾಜರಿದ್ದ ಅಧಿಕಾರಿ/ನೌಕರರ ವಿವರ:

| ಕ್ರಮ ಸಂಖ್ಯೆ | ಅಧಿಕಾರಿ/ಸಿಬ್ಬಂದಿ | ಹುದ್ದೆ | ಕಾರ್ಯನಿರ್ವಹಿಸುತ್ತಿರುವ ಸ್ಥಳ |
|---|---|---|---|
| 1 | ಶ್ರೀ ರವಿಶಂಕರ್ | ಕಾಇಂ(ವಿ) | ಮದ್ದೂರು ವಿಭಾಗ, ಮದ್ದೂರು |
| 2 | ಶ್ರೀ ಮೋಹನ್ ಜಿ | ಸಕಾಇಂ(ವಿ) | ಮದ್ದೂರು ಉಪವಿಭಾಗ-2 |
| 3 | ಶ್ರೀ ನಾಗರಾಜು | ಸಹಾಯಕ ಲೆಕ್ಕಾಧಿಕಾರಿ | ವಿಭಾಗೀಯ ಕಛೇರಿ, ಮದ್ದೂರು |
| 4 | ಶ್ರೀ ತೇಜ್ ಪ್ರಕಾಶ್ | ಕಿಇಂ(ವಿ) | ಕೆ.ಹೊನ್ನಲಗೆರೆ ಶಾಖೆ |
| 5 | ಶ್ರೀ ಶಿವಕುಮಾರ್ | ಕಿಇಂ(ವಿ) | ಕೆಸ್ತೂರು ಶಾಖೆ |
| 6 | ಶ್ರೀ ಸಂತೋಷ್ | ಕಿಇಂ(ವಿ) | ಬೆಸಗರಹಳ್ಳಿ ಶಾಖೆ |
| 7 | ಶ್ರೀ ಶಿವರಾಜು | ಪ್ರಕಿಇಂ(ವಿ) | ಕೌಡ್ಲೆ ಶಾಖೆ |

ಸಭೆಯಲ್ಲಿ ಹಾಜರಿದ್ದ ಎಲ್ಲಾ ಗ್ರಾಹಕರು/ನೌಕರರುಗಳನ್ನು ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಮದ್ದೂರು ರವರು, ಸ್ವಾಗತಿಸಿ ಈ ಕೆಳಕಂಡ ಗ್ರಾಹಕರ ದೂರುಗಳಿಗೆ ಪ್ರತಿಕ್ರಿಯಿಸಿ ಉತ್ತರಿಸಿದರು.

| | | |
|---|---|---|
| ಗ್ರಾಹಕರು– ಶ್ರೀ ತಿಮ್ಮೇಗೌಡ, ಕೂಳಗೆರೆ 7676442663 | | |
| 6 | ಗ್ರಾಹಕರು ಅಕ್ರಮ-ಸಕ್ರಮ ಯೋಜನೆಯಡಿ 2017–2018ನೇ ಸಾಲಿನಲ್ಲಿ ಹಣ ಪಾವತಿಸಿದ್ದು ಐಪಿ ಸ್ಥಾವರಕ್ಕೆ ಮೂಲಭೂತ ಸೌಕರ್ಯ ಒದಗಿಸಿಕೊಡಬೇಕೆಂದು ಕೋರಿದರು. | ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಮದ್ದೂರು ರವರು ಮಾತನಾಡಿ 2016/2017ನೇ ಸಾಲಿನ ಗ್ರಾಹಕರ ನಂತರ ಜೇಷ್ಠತಾ ಪಟ್ಟಿಯನುಸಾರ ಮುಂದಿನ ದಿನಗಳಲ್ಲಿ ಮೂಲಭೂತ ಸೌಕರ್ಯ ಒದಗಿಸಿಕೊಡಲು ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು. |
| ಗ್ರಾಹಕರು– ಶ್ರೀ ರಾಮಣ್ಣ, ಶಿವಕುಮಾರ್ ಹುನುಗನಹಳ್ಳಿ ಗ್ರಾಮ 9901118457 | | |
| 7 | ನಮ್ಮ ಐಪಿ ಸೆಟ್‌ಗೆ ಸಂಬಂಧಪಟ್ಟಂತೆ ಹೆಚ್ಚುವರಿ ಪರಿವರ್ತಕ ಅಳವಡಿಸುವ ಅಂದಾಜು ಪಟ್ಟಿಗೆ ಕಾರ್ಯಾದೇಶವಾಗಿದೆ. ದಯಮಾಡಿ ಜರೂರಾಗಿ ಕೆಲಸಮಾಡಿಸಿಕೊಡಿ ಎಂದು ತಿಳಿಸಿದರು. | ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಮದ್ದೂರು ರವರು ಮಾತನಾಡಿ ಉಪವಿಭಾಗದ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರಿಗೆ ತಿಳಿಸಿ ಆದಷ್ಟು ಬೇಗ ಕಾಮಗಾರಿ ನಿರ್ವಹಿಸಲು ಗಮನ ಹರಿಸುವಂತೆ ತಿಳಿಸಿದರು. |
| ಗ್ರಾಹಕರು– ಶ್ರೀ ನಾಗೇಶ್, ಕೋಡಿನಾಗನಹಳ್ಳಿ 9611417269 | | |
| 8 | ನಮ್ಮ ಐಪಿಲಿಮಿಟ್‌ಗೆ ಸಂಬಂಧಪಟ್ಟಂತೆ ಹೆಚ್ಚುವರಿ ಪರಿವರ್ತಕ ಅಳವಡಿಸುವ ಅಂದಾಜು ಪಟ್ಟಿ ಸಲ್ಲಿಸಲಾಗಿದೆ. ಕಾರ್ಯಾದೇಶವಾಗಿಲ್ಲ ಎಂದು ತಿಳಿಸಿದರು. | ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಮದ್ದೂರು ರವರು ಮಾತನಾಡಿ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ಕ) ರವರಿಗೆ ತಿಳಿಸಿ ಅಂದಾಜು ಪಟ್ಟಿಯನ್ನು ಪರಿಶೀಲಿಸಿ ಮುಂದಿನ ಕ್ರಮ ಕೈಗೊಳ್ಳುವಂತೆ ಸೂಚಿಸಿದರು. |
| ಗ್ರಾಹಕರು– ಶ್ರೀ ಅನಿಲ್, ಮುದಿಗೆರೆ 9164613283 | | |
| 9 | ನಮ್ಮದೇ ಆದ 2 ಐಪಿ ಸೆಟ್ ಇದ್ದು 20 ಹೆಚ್‌ಪಿ ವಿದ್ಯುತ್ ಭಾರವಿದ್ದು, ಅಕ್ರಮ – ಸಕ್ರಮ ಯೋಜನೆಯಡಿ ಪರಿವರ್ತಕ ಅಳವಡಿಸಿಕೊಳ್ಳಲಾಗಿದೆ. ಪಕ್ಕದ ಗ್ರಾಹಕರು ಇತ್ತೀಚಿಗೆ ಐಪಿ ಸೆಟ್ ಹೊಂದಿದ್ದು, ನಮ್ಮ ಐಪಿ ಸೆಟ್ ಬಳಿ ಇರುವ ಪರಿವರ್ತಕಕ್ಕೆ ಅಕ್ರಮ ಸಂಪರ್ಕ ಹೊಂದಿದ್ದಾರೆ. ಅದನ್ನು ತೆಗೆಸಿ ಸರಿಪಡಿಸಿಕೊಡಿ ಎಂದು ಕೋರಿದರು. | ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಮದ್ದೂರು ರವರು ಮಾತನಾಡಿ ಬೆಸಗರಹಳ್ಳಿ ಶಾಖಾಧಿಕಾರಿಯವರಿಗೆ ತಿಳಿಸಿ ಸ್ಥಳ ಪರಿಶೀಲಿಸಿ ಅಕ್ರಮ ಐಪಿ ಸೆಟ್‌ನ ಸಂಪರ್ಕವನ್ನು ತೆಗೆಸಿ ಗ್ರಾಹಕರಿಗೆ ತೊಂದರೆಯಾಗದಂತೆ ವಿದ್ಯುತ್ ಸಂಪರ್ಕ ಕೊಡಲು ಸೂಚಿಸಿದರು. |
| ಗ್ರಾಹಕರು– ಶ್ರೀ ಚಿಕ್ಕತಮ್ಮಯ್ಯ, ವಳಗೆರೆದೊಡ್ಡಿ 9008302323 | | |
| 10 | ನಮ್ಮ ಐಪಿ ಸೆಟ್‌ಗೆ ಸಂಬಂಧಪಟ್ಟಂತೆ ಹೆಚ್ಚುವರಿ ಪರಿವರ್ತಕ ಅಳವಡಿಸುವ ಅಂದಾಜು ಪಟ್ಟಿಗೆ ಕಾರ್ಯಾದೇಶವಾಗಿ ಕಾಮಗಾರಿ ಪೂರ್ಣಗೊಂಡಿದೆ. ಪರಿವರ್ತಕ ಮಾತ್ರ ಇನ್ನೂ ಅಳವಡಿಸಿಲ್ಲ ಎಂದು ತಿಳಿಸಿದರು. | ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಮದ್ದೂರು ರವರು ಮಾತನಾಡಿ ಉಪವಿಭಾಗದ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರಿಗೆ ತಿಳಿಸಿ, ಕೆಸ್ತೂರು ಶಾಖಾಧಿಕಾರಿಯವರಿಗೆ ಸೂಚಿಸಿ ಆದಷ್ಟು ಬೇಗ ಪರಿವರ್ತಕ ಅಳವಡಿಸುವಂತೆ ತಿಳಿಸಿದರು. |
| ಗ್ರಾಹಕರು– ಶ್ರೀ ಮುನಿಯಪ್ಪ, ತೊಪ್ಪನಹಳ್ಳಿ 9611148381 | | |
| 11 | ಸದರಿ ಗ್ರಾಹಕರು ಐಪಿ ಸೆಟ್ ಬಳಿ ಲೈನ್ ಜೋತು ಬಿದ್ದಿದ್ದು ಕಬ್ಬಿನ ಬೆಳೆಗೆ ತಗಲುತ್ತಿರುವುದಾಗಿ ತಿಳಿಸುತ್ತಾ, ವಿದ್ಯುತ್ ಕಂಬ ಅಳವಡಿಸಿಕೊಡಿ ಎಂದು ಕೋರಿದರು. | ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಮಾತನಾಡಿ ಕಿರಿಯ ಇಂಜಿನಿಯರ್(ವಿ) ಕೆ.ಹೊನ್ನಲಗೆರೆ ರವರಿಗೆ ಸೂಚಿಸಿ ಸ್ಥಳ ಪರಿಶೀಲಿಸಿ ಮಧ್ಯಂತರ ಕಂಬ ಅಳವಡಿಸಿ ಜರೂರಾಗಿ ಸಮಸ್ಯೆ ಬಗೆಹರಿಸುವಂತೆ ತಿಳಿಸಿದರು. |

| | | |
|---|---|---|
| ಗ್ರಾಹಕರು– ಶ್ರೀ ಪುಟ್ಟಸ್ವಾಮಿ, ಜೋಗಿಕೊಪ್ಪಲು | | |
| 17 | ಗ್ರಾಹಕರು ಅಕ್ರಮ–ಸಕ್ರಮ ಯೋಜನೆಯಡಿ 2012ನೇ ಸಾಲಿನಲ್ಲಿ ಹಣ ಪಾವತಿಸಿದ್ದು ಐಪಿ ಸ್ಥಾವರಕ್ಕೆ ಮೂಲಭೂತ ಸೌಕರ್ಯ ಒದಗಿಸಿಕೊಡಬೇಕೆಂದು ಕೋರಿದರು. (RR NO MRUIP 823 ) | ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಮದ್ದೂರು ರವರು ಮಾತನಾಡಿ ಉಪ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರಿಗೆ ತಿಳಿಸಿ ಜರೂರಾಗಿ ಅಂದಾಜು ಪಟ್ಟಿಯನ್ನು ಸಲ್ಲಿಸುವಂತೆ ಸಂಬಂಧಪಟ್ಟ ಶಾಖಾಧಿಕಾರಿಯವರಿಗೆ ಸೂಚಿಸಲು ತಿಳಿಸಿದರು. |
| ಗ್ರಾಹಕರು– ಶ್ರೀ ರಮೇಶ್, ಬೆಸಗರಹಳ್ಳಿ | | |
| 18 | ಬೆಸಗರಹಳ್ಳಿ ಶಾಲೆಯ ಬಳಿ ಆಲದ ಮರವಿದ್ದು ಪಕ್ಕದಲ್ಲೇ ವಿದ್ಯುತ್ ಲೈನ್ ಹಾದು ಹೋಗಿದೆ. ಅದನ್ನು ತೆರವುಗೊಳಿಸಿ ಎಂದು ಕೋರಿದರು. | ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಮದ್ದೂರು ರವರು ಮಾತನಾಡಿ ಬೆಸಗರಹಳ್ಳಿ ಶಾಖಾಧಿಕಾರಿಯವರಿಗೆ ತಿಳಿಸಿ ಸ್ಥಳ ಪರಿಶೀಲಿಸಿ ನಿಗಮದ ನಿಯಮಾನುಸಾರ ಕ್ರಮ ಕೈಗೊಳ್ಳಲು ಸೂಚಿಸಿದರು. ಮುಂದುವರೆದು ನಿಗಮದ ವ್ಯಾಪ್ತಿಗೆ ಬರದಿದ್ದಲ್ಲಿ ಅರಣ್ಯ ಇಲಾಖೆಗೆ ಸದರಿಯವರ ಅರ್ಜಿಯನ್ನು ವರ್ಗಾಹಿಸಲು ತಿಳಿಸಿದರು. |
| ಗ್ರಾಹಕರು– ಶ್ರೀ ಮಲ್ಲೇಶ್, ಬೆಸಗರಹಳ್ಳಿ 9945284755 | | |
| 19 | RR NO MRL 8383 ಸ್ಥಾವರದ ಗ್ರಾಹಕರು ಬಿಲ್ ವ್ಯತ್ಯಾಸವಾಗಿದ್ದು ಸರಿಪಡಿಸಿಕೊಡಿ ಎಂದು ಕೋರಿದರು. | ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಮದ್ದೂರು ರವರು ಮಾತನಾಡಿ ಉಪ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರಿಗೆ ತಿಳಿಸಿ ಮಾಪಕ ಪರಿಶೀಲಿಸಿ ವಿದ್ಯುತ್ ಬಿಲ್ ಸರಿಪಡಿಸಿಕೊಡಲು ಸೂಚಿಸಿದರು. |

ಈ ಮೇಲಿನ ಎಲ್ಲಾ ವಿಷಯಗಳ ಬಗ್ಗೆ ಚರ್ಚಿಸಿ, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಮದ್ದೂರು ರವರು ಮಾತನಾಡಿ ದಿನೇ ದಿನೇ ಸಮಸ್ಯೆಗಳು ಹಿಂದಿಗಿಂತಲೂ ಹೆಚ್ಚಾಗುತ್ತಿವೆ. ಆದರೂ ಸಹ ನಾವುಗಳು ಗ್ರಾಹಕರೊಂದಿಗೆ ಸಹಕರಿಸಿ ಸಮಸ್ಯೆಗಳನ್ನು ಬಗೆಹರಿಸಬೇಕು. ಮುಂದುವರೆದು ಪರಿವರ್ತಕ ವಿಫಲತೆಯನ್ನು ತಡೆಯಲು ಆದಷ್ಟು ಜಾಗರೂಕರಾಗಿರಬೇಕು. ವಿಫಲ ಪರಿವರ್ತಕಗಳನ್ನು ಬದಲಾಯಿಸಲು ವಿಭಾಗೀಯ ಉಗ್ರಾಣದಲ್ಲಿ ಪರಿವರ್ತಕಗಳು ಸಾಕಷ್ಟು ಲಭ್ಯವಿದ್ದು, ಜರೂರಾಗಿ ಬದಲಿಸಲು ಕ್ರಮ ಕೈಗೊಳ್ಳುವಂತೆ ಸೂಚಿಸುತ್ತಾ ಮುಂದಿನ ಜನ ಸಂಪರ್ಕ ಸಭೆಯ ವೇಳೆಗೆ ನಿಮ್ಮ ಎಲ್ಲಾ ಸಮಸ್ಯೆಗಳನ್ನು ಪರಿಹರಿಸಲು ಪ್ರಯತ್ನಿಸುವುದಾಗಿ ತಿಳಿಸಿ ಸಭೆಯನ್ನು ಸಾಯಂಕಾಲ 5.00 ಗಂಟೆಗೆ ಮುಕ್ತಾಯಗೊಳಿಸಲಾಯಿತು.

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ಸೆಸ್ಕ್, ಗ್ರಾಮಾಂತರ ಉಪ ವಿಭಾಗ, ಮದ್ದೂರು

ಪ್ರತಿಯನ್ನು,

1) ಪ್ರಧಾನ ವ್ಯವಸ್ಥಾಪಕರು, ಚಾವಿಸನಿನಿ, ನಿಗಮ ಕಾರ್ಯಾಲಯ, ಮೈಸೂರು ರವರ ಅವಗಾಹನೆಗಾಗಿ ಸಲ್ಲಿಸಿದೆ.
2) ಮುಖ್ಯ ಇಂಜಿನಿಯರ್(ವಿ), ಚಾವಿಸನಿನಿ, ಮೈಸೂರು ವಲಯ, ಮೈಸೂರು ರವರ ಅವಗಾಹನೆಗಾಗಿ ಸಲ್ಲಿಸಿದೆ.
3) ಅಧೀಕ್ಷಕ ಇಂಜಿನಿಯರ್(ವಿ), ಕಾ ಮತ್ತು ಪಾ ವೃತ್ತ, ಮಂಡ್ಯರವರ ಅವಗಾಹನೆಗಾಗಿ ಸಲ್ಲಿಸಿದೆ.
4) ಕಾರ್ಯನಿರ್ವಾಹಕ ಇಂಜಿನಿಯರ್(ವಿ), ವೃತ್ತ ಕಛೇರಿ, ಮಂಡ್ಯ ರವರ ಅವಗಾಹನೆಗಾಗಿ ಸಲ್ಲಿಸಿದೆ.
5) ಕಾರ್ಯನಿರ್ವಾಹಕ ಇಂಜಿನಿಯರ್(ವಿ), ವಿಭಾಗೀಯ ಕಛೇರಿ, ಮದ್ದೂರು ರವರ ಅವಗಾಹನೆಗಾಗಿ ಸಲ್ಲಿಸಿದೆ.
6) ಲೆಕ್ಕಾಧಿಕಾರಿ(ಆಂಪ), ಸೆಸ್ಕ್, ವಿಭಾಗೀಯ ಕಛೇರಿ, ಮದ್ದೂರು ರವರ ಅವಗಾಹನೆಗಾಗಿ ಸಲ್ಲಿಸಿದೆ.
7) ಸಹಾಯಕ ಇಂಜಿನಿಯರ್(ತಾಂ), ಗ್ರಾಮಾಂತರ ಉಪವಿಭಾಗ, ಮದ್ದೂರು ರವರ ಮುಂದಿನ ಕ್ರಮಕ್ಕಾಗಿ,

ಮು.ಕ